# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -20.09.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಹನುಮಂತಪ್ಪ | ಫ್ರಾ.ಸಾ. | - | 10 |
| ತಂದೆಯ ಹೆಸರು | - | ಕರಿಯಾಬೋವಿ | ಚಾ.ಸಾ. | - | 10 |
| ವಯಸ್ಸು | - | 42 ವರ್ಷ | | | |
| ಉದ್ಯೋಗ | - | ಕೂಲಿ ಕೆಲಸ | | | |
| ವಾಸ ಸ್ಥಳ | - | ಕಣಿವೆ ಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ 01 ನನ್ನ ಹೆಂಡತಿ . ಚಾಸಾ 7 ನನ್ನ ತಮ್ಮ . ಚಾಸಾ11 ನನ್ನ ತಂದೆ . ಚಾಸಾ 12, 13 ನನ್ನ ಮಕ್ಕಳು . ನ್ಯಾಯಾಲಯದ ಮುಂದಿರುವ ಆರೋಪಿಗಳೆಲ್ಲರೂ ಗೊತ್ತು .

2. ನಮಗೆ ಕಸವನಹಳ್ಳಿಯ ಸರ್ವೆ ನಂ. 51 ರಲ್ಲಿ ಜಮೀನು ಇದೆ . ಸದರಿ ಜಮೀನು ಕರಿಯಾಬೋವಿ ನನ್ನ ತಾಯಿ ನಾಗಮ್ಮನ ಹೆಸರಿನಲ್ಲಿ ಇದೆ . ಘಟನೆ ನಡೆದಾಗ ನಾವು ಅದೇಜಮೀನಿನಲ್ಲಿ ಇದ್ದ ಗುಡಿಸಲು ಮನೆಯಲ್ಲಿ ಇದ್ದೇವು .

3. ದಿಃ 01.08.2020 ರಲ್ಲಿ ನಾನು , ಚಾಸಾ 1, 7, 10, 12, 13 ರವರುಗಳು ಸದರಿ ಗುಡಿಸಲು ಮನೆಯಲ್ಲಿ ಇದ್ದಾಗ ಚಿತ್ತಪ್ಪ , ಕರಿನಿಂಗಪ್ಪ ,ಮಸ್ಕಲ್ಲಪ್ಪ , ರಮೇಶ , ಶ್ರೀನಿವಾಸ, ಕೆಂಚಪ್ಪ , ಚಂದ್ರಪ್ಪ , ಶ್ರೀನಿವಾಸ , ಚಿತ್ತಪ್ಪ , ಸಣ್ಣಪ್ಪ , ವೆಂಕಟೇಶ ಮಹಂತೇಶ , ಅಶೋಕ , ವಾಸು , ಒಟ್ಟು 17 ಜನ ಗುಂಪು ಕಟ್ಟಿಕೊಂಡು ಅಲ್ಲಿಗೆ ಬಂದು ನಮ್ಮ ಹೊಲಕ್ಕೆ ಕುರಿಗಳನ್ನು ದೂಡಿ ಅಡಿಕೆ ಗಿಡ ಕಡಿದರು ಮತ್ತು ಮೆಕ್ಕೆ ಜೋಳ

ಮೇಯಿಸಿದರು , ನನಗೆ, ನನ್ನ ಹೆಂಡತಿ ಮಕ್ಕಳು ಮತ್ತು ತಂದೆಗೆ ಹೊಡೆದರು . ನನಗೆ ಕೊಡಲಿಯಿಂದ ತಲೆಗೆ ಹೊಡೆದರು .ನನಗೆ ರಕ್ತ ಬಂತು . ನಾನು ನೆಲಕ್ಕೆ ಬಿದ್ದೆ . ನನ್ನನ್ನು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದರು . ಮನೆಗೆ ಬೆಂಕಿ ಹಾಕಿ ಸುಟ್ಟು ಹಾಕಿದರು . ಗಿಡಗಳನ್ನು ಸುಟ್ಟು ಹಾಕಿದರು . ಮನೆಯ ಪಾತ್ರೆ ಸಾಮಾನುಗಳು , ಬೋರ್ ವೆಲ್ , ಸಿಂಟೇಕ್ಸ್ , ಮೇಟರ್ ,Starter , ಸುಟ್ಟು ಹಾಕಿದರು . ನನ್ನ ಹೆಂಡತಿಗೆ ಹೊಡೆದು ಜಾಕೀಟು ಹಿಡಿದು ಕಿತ್ತು ಹಾಕಿದರು . ಹೇ ವಡ್ಡಸೂಳೇ ಮಕ್ಕಳಾ ನಿಮ್ಮದೇನೋ ಹೊಲ , ಸೂಳೇ ಮಕ್ಕಳಾ ಉಳಿಸಿಕೊಳ್ಳಿರೋ ಎಂದು ಬೈದರು .

4. ಸಂಜೆ ಚಾಸಾ 7 ರವರ ಮನೆ ಹತ್ತಿರ ಬಂದು ಟಿವಿ ಹೊಡೆದು ಹಾಕಿ ಬಂಗಾರ ತೆಗೆದುಕೊಂಡು ಹೋಗಿದ್ದಾರಂತೆ ದಿ ಈ ಎಲ್ಲಾ ವಿಚಾರವನ್ನು ಪೋಲೀಸರಿಗೆ ಹೇಳಿದ್ದೇನೆ . ಗಲಾಟೆ ಮಾಡಿದವರೆಲ್ಲಾ ಗೊಲ್ಲ ಜನಾಂಗದವರು . ನಾವು ಬೋವಿ ಜನಾಂಗದವರು . ಸದರಿ ಹೊಲ ಸರ್ಕಾರದ್ದಾಗಿದ್ದು ಕುರಿ ಮೇಕೆ ಮೇಯಿಸಲು ಬಿಡಬೇಕು ನೀವು ಉಳುಮೆ ಮಾಡುವ ಹಾಗಿಲ್ಲ ಅಂತ ಆ ರೀತಿ ಗಲಾಟೆ ಮಾಡಿದರು . ಇನ್ನು 7 ಜನ ಈ ದಿನ ನ್ಯಾಯಾಲಯಕ್ಕೆ ಬಂದಿಲ್ಲ . ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ .

**(ಪಾಟೀ ಸವಾಲು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ 500/- ರ ಖರ್ಚಿನೊಂದಿಗೆ ಮುಂದೂಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

4 . ಚಾಸಾ 1 ನನ್ನ ಚಿಕ್ಕಮ್ಮ . ನಾನು 10 ವರ್ಷದಿಂದ ಮಾರುತಿಹಳ್ಳಿಯಲ್ಲಿ ಇದ್ದೇನೆ . ಸ್ಥಳಕ್ಕೆ ಬರುವಂತೆ ನನಗೆ ನೋಟೀಸ್ ನೀಡಿರಲಿಲ್ಲ . ನಿಪಿ –12 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಪೋಲೀಸರು ಸಹಿ ಮಾಡುವಂತೆ ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ . ಚಾಸಾ1, 7 ನನಗೆಸಹಿ ಮಾಡುವಂತೆ ಹೇಳಿದರು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಎಂದೂ ಠಾಣೆಗೆ ಹೋಗಿಲ್ಲ ಎಂದರೆ ಸರಿ . ಪೋಲೀಸರಿಗೆ ನಾನು ಘಟನೆ ಬಗ್ಗೆ ಚಾಸಾ 7 ರವರ ಮನೆ ಹತ್ತಿರ ಹೇಳಿದ್ದೇನೆ . ಪೋಲೀಸರು ಅದನ್ನು ಬರವಣಿಗೆ ಮಾಡಿಕೊಳ್ಳಲಿಲ್ಲ . ಮಾರುತಿ ಹಳ್ಳಿಯ ಎಲ್ಲಾ ಜನರನ್ನು ನಾನು ನೋಡಿದ್ದೇನೆ . ಆಶೋಕ ಮತ್ತು ಮಹಂತೇಶ ಕಲ್ಲುಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೆ ನೀಡಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಏನು ತಿಳಿಯದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.